**ಸಿ. ಸಿ. ನಂ. 181/2017**

**ಸಿ ಡಬ್ಲ್ಯೂ: 6**

**ಪಿ ಡಬ್ಲ್ಯೂ: 6**

**ಸಾಕ್ಷಿಯು ದಿನಾಂಕ:** 22-11-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಆರೋಪಿ ಪರ ಶ್ರೀ ಸಿ.ಪಿ.ವಾಯ್ ವಕೀಲರಿಂದ</u>**

ನಾನು ಆರೋಪಿಯ ಮನೆಗೆ ಹೋದಾಗ ದಾಖಲೆಗಳನ್ನು ಪರಿಶೀಲಿಸಿಲ್ಲ, ಸಾಕ್ಷಿ ಮುಂದುವರೆದು ಠಾಣೆಗೆ ಕರೆಸಿಕೊಂಡು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಆರಕ್ಷಕ ನೀರಿಕ್ಷಕರು ಪರಿಶೀಲಿಸಿಸುವುದಕ್ಕೂ ಮೊದಲು ನಾನು ಪರಿಶೀಲಿಸಿರುತ್ತೇನೆ. ನಾನು ಆಧಾರ ಕಾರ್ಡ್ ಮತ್ತು ರೇಷನ್ ಕಾರ್ಡ್ ಪರಿಶೀಲಿಸಿದ್ದೆ. ಆಧಾರ್ ಮತ್ತು ರೇಷನ್ ಕಾರ್ಡ್ ಗಳಲ್ಲಿ ವ್ಯಕ್ತಿಗಳ ಪೋಟೋ ಇರುತ್ತದೆ ಅಂದರೆ ಸರಿ . ಸದರಿ ದಾಖಲೆಗಳನ್ನು ನೋಡಿದಾಗ ನನಗೆ ವ್ಯತ್ಯಾಸಗಳು ಕಂಡುಬಂದವು ಅಂದರೆ ಸರಿ . ನಾನು ವ್ಯತ್ಯಾಸಗಳು ಕಂಡು ಬಂದ ನಂತರ ಆರಕ್ಷಕ ನೀರಿಕ್ಷರಿಗೆ ವರದಿ ಒಪ್ಪಿಸುತ್ತೇನೆ ಅಂದರೆ ಸರಿ . ನಾನು ಆರಕ್ಷಕ ನೀರಿಕ್ಷಕರಿಗೆ ಬಾಯಿ ಮಾತಿನಲ್ಲಿಯೇ ವರದಿ ನೀಡಿರುತ್ತೇನೆ. ಆ ರೀತಿ ದಾಖಲೆಗಳಲ್ಲಿ ತಪ್ಪು ಕಂಡಾಗ ವಿಚಾರಿಸಿ ತಿದ್ದಿ ಕೊಳ್ಳುತ್ತೇವೆ ಎಂದು ಅರ್ಜಿದಾರರು ಹೇಳಿದರೆ ಅನುಮೊದನೆಯನ್ನು ಆರಕ್ಷಕ ನೀರಿಕ್ಷಕರು ಕೊಡುತ್ತಾರೆ. ಆರೋಪಿ ದಾಖಲೆಗಳಲ್ಲಿನ ವ್ಯತ್ಯಾಸಗಳನ್ನು ತಿದ್ದುಪಡಿ ಮಾಡಿಸಿಕೊಂಡು ನಮಗೆ ತೋರಿಸಿರುವುದಿಲ್ಲ. ನಮ್ಮ ಪೋರ್ಟಲ್ ನಲ್ಲಿ ಆರೋಪಿಯ ಪಾಸ್ ಪೋರ್ಟ್ ಗೆ ಅನುಮೊದನೆ ನೀಡಿ ವರದಿ ಸಲ್ಲಿಸಿರುತ್ತೇವೆ ಅಂದರೆ ಸರಿ . ದಾಖಲೆಗಳಲ್ಲಿ ವ್ಯತ್ಯಾಸ ಇದೆ ಎಂದು ಗೊತ್ತಿದ್ದರೂ ಸಹ ಆ ರೀತಿ ವರದಿ ಸಲ್ಲಿಕೆ ಆಗಿದೆ ಅಂದರೆ ಸರಿ .

ಪಾಸ್ ಪೋರ್ಟ್ ಅನುಮೊದನೆಗೆ ದಾಖಲೆ ಪರಿಶೀಲನೆಗೆ ಬಂದಾಗ ಅದರಲ್ಲಿ ವ್ಯತ್ಯಾಸಗಳು ಕಂಡುಬಂದರೆ ಅನುಮೊದನೆ ಮಾಡುವುದಿಲ್ಲ ಅಂದರೆ ಸರಿ . ಆರೋಪಿಗೆ ಪಾಸ್ ಪೋರ್ಟ್ ಅನುಮೊದನೆ ಆಗಿ ಆತನ ಹೆಸರಿನಲ್ಲಿ ಪಾಸ್ ಪೋರ್ಟ್  ಸಹ ಬಂದಿತ್ತು ಅಂದರೆ ಸರಿ . ನಮ್ಮ ನೀಶ್ಕಾಳಜಿತನದಿನಿಂದಲೇ ಆ ರೀತಿ ಪಾಸ್ ಪೋರ್ಟ್  ನಲ್ಲಿ ತಪ್ಪು ಬಂದಿರುತ್ತದೆ ಅಂದರೆ ಸರಿಯಲ್ಲ. ನಾವು ಸರಿಯಾಗಿ ದಾಖಲೆಗಳನ್ನು ಪರಿಶೀಲಿಸದ ಕಾರಣವೇ ಪ್ರಕರಣದಲ್ಲಿನ ತಪ್ಪು ಆಗಿದೆ ಅಂದರೆ ಸರಿಯಲ್ಲ. ದಾಖಲೆಗಳನ್ನು ಪರಿಶೀಲಿಸುವ ಅಧಿಕಾರ ಆರಕ್ಷಕ ನೀರಿಕ್ಷಕರಿಗೆ ಇರುತ್ತದೆ ಅಂದರೆ ಸರಿ . ದಾಖಲೆ ಪರಿಶೀಲಿಸಿದ ನಂತರ ಸಲ್ಲಿಸುವ ವರದಿಯಲ್ಲಿ ಠಾಣಾ ಬರಹಗಾರರ ಹೆಸರನ್ನು ಬರೆಯಲಾಗುತ್ತದೆ ಅಂದರೆ ಸರಿ .

ದಿಃ **20-11-2014** ರಂದು ನಾನು ದಾಖಲೆಗಳನ್ನು ಪರಿಶೀಲಿಸಿದ ಬಗ್ಗೆ ವರದಿಯಲ್ಲಿ ನಮೂದಾಗಿಲ್ಲ ಅಂದರೇ ಸರಿ . ಸಾಕ್ಷಿ ಮುಂದುವರೆದು ರಾಜೇಶ್ ರವರ ಹೆಸರು ನಮೂದು ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅಂತಿಮ ವರದಿಯಲ್ಲಿನ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯನ್ನು ಅವರು ನೋಡಿ ಗುರುತಿಸಿರುವುದರಿಂದ, ಅದರ ಗುರುತಿಸುವಿಕೆಗಾಗಿ ನಿಪಿಃ **33** ಎಂದು ಗುರುತಿಸಲಾಯಿತು.  ನಿಪಿಃ **33** ರ ಪ್ರಕಾರ ದಾಖಲೆಗಳು ಸರಿ ಇವೆ ಎಂದು ವರದಯಾಗಿದೆ ಅಂದರೆ ಸರಿ. ಸದರಿ ವರದಿಯನ್ನು ಪೋಲಿಸ್ ವರೀಷ್ಠಾಧಿಕಾರಿಗಳಿಗೆ ನೀಡಲಾಗಿತ್ತು ಅಂದರೆ ಸರಿ . ನಾನು ದಿಃ **20-11-2014** ರಂದು ಯಾವುದೇ ದಾಖಲೆಯನ್ನು ಪರೀಶೀಲಿಸದಿದ್ದರೂ, ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಆರಕ್ಷಕ ನೀರಿಕ್ಷಕರ ಮಾತು ಕೇಳಿ ಕತೆ ಕಟ್ಟಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಸಿ. ಸಿ. ನಂ. 181/2017**

**ಸಿ ಡಬ್ಲ್ಯೂ: 6**

**ಪಿ ಡಬ್ಲ್ಯೂ: 6**

**ಮರು ವಿಚಾರಣೆಃ ಇಲ್ಲಾ**.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.